### ಕೌದಿಯಲ್ಲಿ ಬೆಸೆದ ಭಾವ

‘ಬಹುತ್ವ–ಮಾತೃತ್ವ’ (ಜ.12, ವಸುಧೇಂದ್ರ) ಲೇಖನ ಓದುತ್ತಾ, ‘ಕೌದಿ’ ಎಂಬ ನಿರ್ಜೀವ ವಸ್ತು ನಮ್ಮ ಜೀವನದಲ್ಲಿ ಹೇಗೆ ಅವಿನಾಭಾವ ಸಂಬಂಧ ಹೊಂದಿದೆ ಎಂದು ಪುಳಕಿತನಾದೆ. ವರ್ಷವಿಡೀ ಚಳಿ ಪ್ರದೇಶದ ನಮ್ಮ ಮಲೆನಾಡಲ್ಲಿ ರಗ್ಗು, ಬ್ಲಾಂಕೆಟ್‌ಗಿಂತಲೂ ನಮ್ಮಮ್ಮ, ಅಕ್ಕ ಹೊಲಿದು ಮೂಡಿಸಿದ ಕೌದಿ ಹೊದ್ದು ಮಲಗಿದರೆ ಬೆಚ್ಚಗಿನ ನಿದ್ದೆ. ಇಂಥ ಕೌದಿಯ ಬೆಚ್ಚಗಿನ ನೆನಪು ಮಾಡಿಕೊಟ್ಟಿತು ಲೇಖನ.

–ಕೇಶವಪ್ರಭು, ಶಿವಮೊಗ್ಗ

### ಕೌದಿಯ ಹೊಸ ಆಯಾಮ

‘ಕೌದಿ’ಯನ್ನು ಹೊಸ ಹೊಸ ಆಯಾಮಗಳಲ್ಲಿ ನೋಡಿದಂಥ ಲೇಖನವಿದು. ಕೌದಿಗೆ ಬಳಸಿದ ಬಟ್ಟೆ ಹಳತಾದರೂ ಅದರ ಹಿಂದಿನ ಭಾವ ಚಿರಸ್ಥಾಯಿ ಎಂಬ ಲೇಖನದ ದನಿ ಮೆಚ್ಚುಗೆಯಾಯಿತು.

–ಜಿ.ಜಿ. ಹಿರೇಮಠ

### ಅದ್ಭುತ ವಿವರಣಾ ಶೈಲಿ

ಕೌದಿ ಹುಟ್ಟಿನೊಂದಿಗೆ ತಳುಕು ಹಾಕಿಕೊಂಡ ಮಾತೃ ಹೃದಯ ಸಂಸ್ಕೃತಿಯ ವಿವರಣಾ ಶೈಲಿ ಅದ್ಭುತ. ಕೌದಿ ಕುರಿತ ಹೋಲಿಕೆಗಳು, ಉಪಮೆಗಳಿಂದ ಕೂಡಿದ ಪದಗಳ ಪ್ರಯೋಗ ಮನಸ್ಸಿಗೆ ಹಿಡಿಸಿತು.

–ಸಿದ್ದಪ್ಪ ತಲ್ಲೂರು

### ಬರಹಗಾರ್ತಿಯ ಚೆಂದದ ನೆನಕೆ



‘ಎಂ.ಕೆ. ಇಂದಿರಾ; ಅಂದಿಗೂ ಇಂದಿಗೂ ಎಂದಿಗೂ’ (ಜ.12, ಮಹತಿ)– ಇಂದಿರಾ ಅವರ ಕುರಿತ ಲೇಖನ ಓದಿ ಸಂತಸವಾಯಿತು. ಇಂದಿರಾ ಅವರ ಒಳನೋಟವೇ ಫೇವರೆಟ್.

–ಶಶಿಕಲಾ



### ಮನಸೆಳೆದ ಸಂಚಿಕೆ...

ಸವದತ್ತಿ ಯಲ್ಲಮ್ಮನ ಜಾತ್ರೆಗೆ ಸಿಂಗರಿಸಿ ಹೊರಟ ಜೋಡೆತ್ತಿನ ಬಣ್ಣ ಬಣ್ಣದ ಬಂಡಿಗಳ ಸಾಲು, ಭಂಡಾರದಲ್ಲಿ ಮಿಂದೆದ್ದ ದೇವಸ್ಥಾನ, ಚಿತ್ರಸಂತೆಯಲ್ಲಿನ ವರ್ಣಮಯ ಚಿತ್ರಗಳು ಮತ್ತು ಮಾತೃ ಮಮತೆಯ ಕೌದಿಗಳ ಕುರಿತ ಲೇಖನಗಳು ವರ್ಣ ವಿನ್ಯಾಸದಿಂದಾಗಿ, ಕ್ಯಾಮೆರಾ ಕೌಶಲಗಳಿಂದಾಗಿ ಕಣ್ಮನ ತಣಿಸುವ ಆಕರ್ಷಣೆ ನೀಡಿದವು.

ನಿಮ್ಮೊಡನೆ, ವಿಚಾರ ಲಹರಿ, ಎಂ.ಕೆ.ಇಂದಿರಾ, ಪಿ ಕೋಟ್, ಬಸದಿ ಬೆಟ್ಟ, ಲೋಹದಲ್ಲಿ ಅರಳುವ ಕಲೆ, ನಿಮ್ಮ ಪುಟ, ಆಹಾರ, ಮರಗಳ ಕಥೆ ಮತ್ತು ಸೆಲೆಬ್ರಿಟಿ ವಿಭಾಗಗಳಲ್ಲಿನ ಬರಹಗಳೆಲ್ಲವೂ ಸಮಯೋಚಿತ. ಬರಹಗಳೊಂದಿಗಿದ್ದ ಚಿತ್ರವಿನ್ಯಾಸ, ಆಕರ್ಷಕ ಶೀರ್ಷಿಕೆಗಳು, ವಿಷಯ ನಿರೂಪಣಾ ಕೌಶಲ ಮತ್ತು ಮುದ ನೀಡುವ ಬಣ್ಣಬಣ್ಣದ, ಸಾರ್ಥಕ ಮುಖಪುಟ ಇನ್ನಷ್ಟು ಮೆರುಗು ನೀಡಿವೆ.

–ಮಾಲತಿ ಪಟ್ಟಣಶೆಟ್ಟಿ, ಧಾರವಾಡ

### ಸೊಗಸಾದ ಕಥಾಹಂದರ

‘ಮನದ ವಿರಕ್ತಿ’ (ಜ.12, ಕಲ್ಲೇಶ್ ಕುಂಬಾರ್) ಕಥೆಯು ಗ್ರಾಮೀಣ ಭಾಷಾ ಸೊಗಡಿನಿಂದ ಕೂಡಿದ್ದು, ಓದುಗರ ಮನಸೆಳೆಯುತ್ತದೆ. ಕಲ್ಲವ್ವನ ಮನಸ್ಥಿತಿಯನ್ನು ಕಥಾ ಹಂದರದಲ್ಲಿ ಸುಂದರವಾಗಿ ನಿರೂಪಿಸಿದ್ದಾರೆ. ಕಲ್ಲವ್ವಳ ಭವಿಷ್ಯದ ಬದುಕಿನ ಬಗೆಗಿನ ದಿಟ್ಟ ತೀರ್ಮಾನ ಮೆಚ್ಚುಗೆಯಾಯಿತು.

–ಸುಶೀಲಾ ಸೋಮಶೇಖರ್, ಹಾಸನ

### ಪ್ರಶಂಸನೀಯ ಲೇಖನ

‘ಚಿನ್ನದ ನಾಡಿನ ಅಪ್ರತಿಮ ಅಥ್ಲೀಟ್’ (ಜ.5, ಜಗನ್ನಾಥ ಪ್ರಕಾಶ್ ಎನ್.)– ಕ್ರೀಡಾಪಟು ಕೆನೆತ್ ಪೊವೆಲ್ ಅವರ ಕುರಿತ ಲೇಖನ ಪ್ರಶಂಸನೀಯ. ಅವರು ಕಾಮನ್‌ವೆಲ್ತ್ ಹಾಗೂ ಒಲಿಂಪಿಕ್ ಸ್ಪರ್ಧೆಗಳಲ್ಲಿ ಭಾಗವಹಿಸಿರುವುದು ಕೋಲಾರ ಜಿಲ್ಲೆಯವರಾದ ನಮಗೇ ಗೊತ್ತಿರಲಿಲ್ಲ.

–ಎನ್.ವಿ. ರಾಮಚಂದ್ರರಾವ್, ಅಧ್ಯಕ್ಷರು,
ಹಿರಿಯ ವಿದ್ಯಾರ್ಥಿ ಸಂಘ, ಕೋಲಾರ

### ಕೃತಿಗಳ ಆಹ್ವಾನ

ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನವು, 2022ರಲ್ಲಿ ಪ್ರಕಟವಾದ ಅತ್ಯುತ್ತಮ ಕಾದಂಬರಿಗೆ ಪ್ರಶಸ್ತಿ ನೀಡಲು ಲೇಖಕರು ಹಾಗೂ ಪ್ರಕಾಶಕರಿಂದ ಪುಸ್ತಕಗಳನ್ನು ಆಹ್ವಾನಿಸಿದೆ.

25 ಸಾವಿರ ರೂಪಾಯಿ, ಫಲಕವನ್ನು ಪ್ರಶಸ್ತಿ ಒಳಗೊಂಡಿದೆ. ಪುಸ್ತಕದ 2 ಪ್ರತಿಗಳನ್ನು ಫೆ.15ರ ಒಳಗೆ ಕಳುಹಿಸಬೇಕು. ಪುಸ್ತಕ ಕಳುಹಿಸಬೇಕಾದ ವಿಳಾಸ: ಇ. ಬಸವರಾಜ, ಪ್ರಧಾನ ಕಾರ್ಯದರ್ಶಿ, ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ, ನಂ. 118, ಎಚ್.ಎಂ.ಟಿ. ಲೇಔಟ್, ನಾಗಸಂದ್ರ, ಬೆಂ– 73. ಹೆಚ್ಚಿನ ಮಾಹಿತಿಗೆ: 9686073837.

### ನೆನಪುಗಳ ಜಾತ್ರೆ ಹೊರಟಿತು...

‘ಬಂಡಿಗಳ ಧ್ಯಾನ; ಭಂಡಾರ ಮಜ್ಜನ’ (ಜ.12, ಪ್ರಕಾಶ ಕಂದಕೂರ) ಲೇಖನದಲ್ಲಿ, ಯಲ್ಲಮ್ಮನ ಜಾತ್ರಾ ಚಿತ್ರಗಳನ್ನು ನೋಡಿ ಖುಷಿಯಾಯಿತು. ಬಣ್ಣ ಬಣ್ಣದ ಚಕ್ಕಡಿಗಳು, ಉತ್ಸಾಹದಿಂದ ಅಡುಗೆ ಮಾಡುತ್ತಿರುವ ದೃಶ್ಯಗಳೆಲ್ಲವೂ ಹಿತ ಎನಿಸಿದವು. ಕೆಲ ವರ್ಷದ ಹಿಂದೆ ನಾನೂ ಯಲ್ಲಮ್ಮನ ದರ್ಶನಕ್ಕೆ ಹೋಗಿದ್ದೆ. ಜಾತ್ರೆಯಲ್ಲಿ ಅಸಂಖ್ಯಾತ ಜನ. ಆದರೆ ಅತ್ಯುತ್ಸಾಹದಿಂದ ಬರುವ ಜನರಿಗೆ ಯಾವ ಮೂಲ ಸೌಕರ್ಯವೂ ಇಲ್ಲ. ಇದನ್ನು ನೋಡಿ ಬೇಸರವಾಯಿತು.

–ಪಂಕಜಾ ಎಸ್.ಆರ್., ಬೆಂಗಳೂರು



ಸವದತ್ತಿ ಯಲ್ಲಮ್ಮನ ಜಾತ್ರೆ ನಡೆಯುವ ಆಚರಣೆಯೇ ವಿಶೇಷವೆನಿಸಿತು. ಈಗಿನ ಕಾಲದಲ್ಲೂ ಬಂಡಿಗಳಲ್ಲೇ ಜಾತ್ರೆಗೆ ಬರುವುದು, ಅಲ್ಲಿಯೇ ಠಿಕಾಣಿ ಹೂಡಿ, ಅಡುಗೆ ಮಾಡುವುದು ಎಲ್ಲವೂ ಆಶ್ಚರ್ಯವೆನಿಸಿತು.

–ಬಿ. ಶೋಭಾ ಅರಸ, ತೆಕ್ಕಟ್ಟೆ

ಸವದತ್ತಿ ಯಲ್ಲಮ್ಮನ ಜಾತ್ರೆಯ ಪುಟಗಳು ಅದ್ಭುತವಾಗಿವೆ. ಈ ಜಾತ್ರೆ ಬಗ್ಗೆ ಕೇಳಿದ್ದೆ, ಆದರೆ ಲೇಖನ ಓದಿ ಜಾತ್ರೆಗೆ ಹೋಗಿ ಬಂದ ಅನುಭವವಾಯಿತು.

ಮುಂಜಾನೆ ಮಂಜಿನಲ್ಲಿ ಸಾಗುವ ಸಾಲು ಸಾಲು ಬಂಡಿಗಳು, ಬಂಡಿ ತಳ್ಳುತ್ತಿರುವ ಜನರ ಆನಂದ, ಭಂಡಾರದಲ್ಲಿ ಶೃಂಗರಿಸಿದ ಯಲ್ಲಮ್ಮನ ಸನ್ನಿಧಾನ, ಪುಟ್ಟ ಗುಡಿಸಲುಗಳಂತೆ ಕಾಣುವ ಭಕ್ತರ ಬಂಡಿಗಳು, ಏಳುಕೊಳ್ಳದಲ್ಲಿರುವ ಚಕ್ಕಡಿ ಹಿಂಡಿನ ಚಿತ್ರಗಳು ಕಣ್ಣು ತುಂಬಿದವು. ನೇರ ಜಾತ್ರೆಗೇ ಹೋದಂತಾಯಿತು.

–ನಿಶಾ ಗುಡೂರ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in